ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ ...ESI/89/2016-17...

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯಪುರ ವಿಭಾಗ ರವರಿಗೆ ಮಂಡಿಸಿದೆ.

ವಿಷಯ: Desilting of Storm Water Drain in Ward No. 10 (Doddabommasandra), Vidyaranyapura Sub Division ರ ಕಾಮಗಾರಿಗೆ ಅನುಮೋದನೆ ನೀಡುವ ಬಗ್ಗೆ.

****

(1) ವಿದ್ಯಾರಣ್ಯಪುರ ಉಪವಿಭಾಗದ ವಾರ್ಡ್ ನಂ. 10 (ದೊಡ್ಡಬೊಮ್ಮಸಂದ್ರ) ಪೆಟ್ರೋಲ್ ಬಂಕ್‌ನಿಂದ ವೆಂಕಟಗಿರಿಯಪ್ಪ ಬಡಾವಣೆವರೆಗೆ 1600.00 ಮೀ., ಪೆಟ್ರೋಲ್ ಬಂಕ್‌ನಿಂದ ಕಾಳಪ್ಪ ಬಡಾವಣೆ ವರೆಗೆ 1650.00 ಮೀ., ಸಿಮೆ ಎಣೆ ಬಂಕ್ ನಿಂದ ಹನುಮಾನ್ ಬಡಾವಣೆ, 1600.00 ಮೀ ಹಾಗೂ ಸೀತಪ್ಪ ಬಡಾವಣೆಯಿಂದ ಏಳುಮಂದಮ್ಮ ಬಡಾವಣೆ 2100.00 ಮೀಗಳ ಉದ್ದದ ಬೃಹತ್ ನೀರು ಕಾಲುವೆಗಳಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ರಾಜಕಾಲುವೆಗಳಲ್ಲಿ ಹೂಳು ಕಾಲಕಾಲಕ್ಕೆ ತೆಗೆಯದ ಕಾರಣ ಹೆರಳವಾಗಿ ಹೂಳು ಸಂಗ್ರಹವಾಗಿ ಮಳೆಯ ನೀರು ಹಾಗೂ ನಿತ್ಯ ಬಳಕೆಯ ನೀರು ಸರಾಗವಾಗಿ ಹೊರ ಹರಿಯದೆ ತಗ್ಗು ಪ್ರದೇಶವಾಗ ಸಂಪ್ತಗಿರಿ ಬಡಾವಣೆ ಹಾಗೂ ಬಸವಸಮಿತಿ ಪ್ರದೇಶದ ರಾಜಕಾಲುವೆಯ ಅಕ್ಕ ಪಕ್ಕದ ಮನೆಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತುಂಬ ತೊಂದರೆಯಾಗುತ್ತಿರುತ್ತದೆ ಹಾಗೂ ಅಲ್ಲಿಯೇ ಸಂಗ್ರಹವಾಗಿ ಪರಿಸರ ಮಾಲೀನ್ಯವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾದ್ಯತೆ ಉಂಟಾಗಿರುತ್ತದೆ. ಸದರಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಡಲು ಸಾರ್ವಜನಿಕರು, ಚುನಾಯಿತ ಪ್ರತಿನಿಧಿಗಳು ದೂರಿರುವದರ ಮೇರೆಗೆ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಅವಶ್ಯಕ ಅಂಶಗಳಿಗೆ ಈ ಕೆಳಕಂಡಂತೆ ಅಂದಾಜಿಸಲಾಗಿದೆ.

(2) ರಾಜಕಾಲುವೆಗಳಲ್ಲಿ ಹೂಳ ತೆಗೆಯುವುದು, ಕಾಲುವೆಗಳ ಬದಿಗಳಲ್ಲಿ ಹೆಚ್ಚುವರಿ ಮಣ್ಣು ಮತ್ತು ಇತರೆ ಅನುಪಯುಕ್ತ ಘನತ್ಯಾಜ್ಯ ವಸ್ತುಗಳನ್ನು ತೆಗೆದು ನಿರ್ದೇಶನದಂತೆ ಹೊರಸಾಗಿಸಲು ಅವಶ್ಯಕ ಅಂಶಗಳಿಗೆ ಅಂದಾಜಿನಲ್ಲಿ ಅವಕಾಶ ಕಲ್ಪಿಸಿಕೊಂಡಿರುತ್ತದೆ.

(3) ಅಂದಾಜನ್ನು 2015-16ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ ಹಾಗೂ 2014-15ನೇ ಸಾಲಿನ ಸಣ್ಣ ನಿವಾವರಿ ವಿಭಾಗದ ದರಗಳನ್ನು ಅಳವಡಿಸಿಕೊಂಡು ರೂ. 25.00 ಲಕ್ಷಗಳಿಗೆ ತಯಾರಿಸಿದೆ.

(4) ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸದೆಬೇಕಾಗಿರುವುದರಿಂದ ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತ, ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲು ಕೋರಿ ಕಡತ ಮಂಡಿಸಿದೆ.

ಸಹಾಯಕ ಅಭಿಯಂತರರ
ವಾರ್ಡ್ ನಂ. 10

ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

(5) ಕಾ.ಪಾ.ಅ (ಬ್ಯಾ.ವಿ).,

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
06	ಕಂಡಿಕೆ (79)ರಲ್ಲಿ ಮಾನ್ಯ ಆಯುಕ್ತರವರು 2 ಕಾಮಗಾರಿಗಳಾದ Mechanical sweeping in main road in Byatarayanapura division phase I and II ಪ್ರತ್ಯೇಕವಾಗಿ ಗುರುತಿಸಿದ್ದು ರೂ. 96.00 ಲಕ್ಷಗಳು ಮತ್ತು ರೂ. 120.00 ಲಕ್ಷಗಳಿಗ ಜಾಬ್ ಕೋಡ್ ಲೆಕ್ಕಶೀರ್ಷಿಕೆ ಪಿ–2200 13ನೇ ಹಣಕಾಸು ಅಡಿಯಲ್ಲಿ 310–15–000079 ರೂ. 96.00 ಲಕ್ಷ ಮತ್ತು ಜಾಬ್ ಸಂಕೇತ 310–15–000078 ರೂ. 120.00 ಲಕ್ಷಗಳಿಗೆ ನೀಡಲಾಗಿದ್ದು, ಒಟ್ಟು 216.00 ಲಕ್ಷ ಅನುದಾನವನ್ನು ಮಳೆನೀರು ಚರಂಡಿಗಳಲ್ಲಿ ಮತ್ತು ಪಕ್ಕದ ಚಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಆದೇಶಿಸಲಾಗಿದೆ. ಆದ್ದರಿಂದ ಜಾಬ್ ಸಂಖ್ಯೆ:310–15–000078 ಮತ್ತು 310–15–000079 ನ್ನು ರದ್ದುಗೊಳಿಸಿ ಸದರಿ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ–2200 13ನೇ ಹಣಕಾಸು ಅನುದಾನದಡಿಯಲ್ಲಿ ಹೊಸ ಜಾಬ್ ಸಂಕೇತ: 010–15–000093 ನೀಡಿ ತುರ್ತಾಗಿ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಕಂಡಿಕೆ (84)ರಲ್ಲಿ ಆದೇಶಿಸಿರುವ ಹಿನ್ನಲೆಯಲ್ಲಿ 2015–16ನೇ ಸಾಲಿನ ಎಸ್.ಆರ್. ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗರವರು ತಯಾರಿಸಿ ಸಲ್ಲಿಸಿರುತ್ತಾರೆ. ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ಪ್ರಸ್ತಾಪಿಸಿರುವ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಲು ಅನುಮೋದನೆಗಾಗಿ ಮಂಡಿಸಿದೆ. H.V. Y ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) 8/9/16
07	ಮುಖ್ಯ ಅಭಿಯಂತರರು (ಯ.ವ)/ಆಯುಕ್ತರು: ಕಂಡಿಕೆ 6 ನ್ನು ಅವಲೋಕಿಸಿ ತಿಳಿಸಿದೆ. ವಾರ್ಡ-10 ರಲ್ಲಿ ಮಳೆನೀರು ಚರಂಡಿ (SWD)ಯ ಹೂಳನ್ನು ತೆಗೆದು ವಿಲೇವಾರಿ ಮಾಡುವ ಕಾಮಗಾರಿಯ 25.00 ಲಕ್ಷ ರೂಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ-ಅನುಮೋದನೆಯನ್ನು ಮತ್ತು ತಾಂತ್ರಿಕ-ಮಂಜೂರಾತಿಯನ್ನು ನೀಡಬಹುದಾಗಿದೆ. 22.9.16
08.	ಮುಖ್ಯ ಅಭಿಯಂತರರು (ಯಲಹಂಕ): 22/9/16 Chief Engineer Yelahanka Zone Bruhath Bangalore Mahanagara Rangalore 92

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....-03-.....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
10	ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ದೊರೆತಿರುವುದರಿಂದ ಮೇ।। ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಕಾರ್ಯಾದೇಶ ನೀಡಲು DTS ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿದೆ. ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) 23/09 23/9/16
11	ಮುಖ್ಯ ಅಭಿಯಂತರರು (ಯ.ವ)/ಪ್ರಾಂಶ. 10ನೇ ಕಂಡಿಕೆಯನ್ವಯ ಅವಗಾಹನೆಗೆ ಅರ್ಹವಾಗಿದೆ. ವಾರ್ಡ್ ನಂ:10ರಲ್ಲಿ SWD ಯಿಂದ ಕೈಗೆತ್ತಿಕೊಳ್ಳಲಾಗಿರುವ 25-00 ಲಕ್ಷಗಳ ಕಾಮಗಾರಿಯ DTS ಗೆ ಅನುಮೋದನೆಯನ್ನು ನೀಡಬಹುದಾಗಿದೆ. 23.9.16
12.	ಮುಖ್ಯ ಅಭಿಯಂತರರು (ಯಲಹಂಕ): 23/9/16 Chief Engineer Yelahanka Zone Bruhath Bangalore Mahanagara Bangalore 92

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
14	ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿರುವುದರಿಂದ ಹಾಗೂ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ಕೈಗೊಳ್ಳಲು ಅನುಮೋದನೆ ನೀಡಿರುವ ಮೇರೆಗೆ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಗೆ ರೂ. 200 ರ ಕರಾರು ಪತ್ರವನ್ನು ಈ ಕಛೇರಿಗೆ ಸಲ್ಲಿಸಲು ಪತ್ರವನ್ನು ತಯಾರಿಸಿ ತಮ್ಮ ಸಹಿಗಾಗಿ ಮಂಡಿಸಿದೆ.
15	ಕಾ.ಪ್ರಾ.ಅ (ಬ್ಯಾ.ವಿ)
16	ಕಂಡಿಕೆ (15) ರಂತೆ ಮೇ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರು ಕರಾರು ಪತ್ರ ಸಲ್ಲಿಸಿದ್ದು, ಅದರಂತೆ ಸದರಿಯವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ರೂ. **22,99,563/-** ಹಾಗೂ KRIDL charges ಗಳಿಗೆ ಕಾರ್ಯಾದೇಶ ನೀಡಲು ಪ್ರತಿಯನ್ನು ಸಿದ್ಧಪಡಿಸಿ ಸಹಿಗಾಗಿ ಮಂಡಿಸಿದೆ.
17	ಕಾ.ಪಾ.ಅ (ಬ್ಯಾ.ವಿ)
18	ಸದರಿ ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದ್ದು ಕಡತವನ್ನು ಲೆಕ್ಕಶಾಖೆಗೆ ಹಸ್ತಾಂತರಿಸಲು ಅನುಮತಿಗಾಗಿ ಮಂಡಿಸಿದೆ.
19	ಕಾ.ಪಾ.ಅ (ಬ್ಯಾ.ವಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 01

..... ಕಡತದ ಸಂಖ್ಯೆ SBL-AE/277/16-17

15/03/2017

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ,

ವಿಷಯ: ಕಾಮಗಾರಿಯ ಬಿಲ್ಲನ್ನು ಪಾವತಿಗಾಗಿ ಸಲ್ಲಿಸುವ ಬಗ್ಗೆ.

ಕೆಲಸದ ಹೆಸರು : Desilting of Storm Water Drain in Ward No. 10 (Doddabommasandra), Vidyaranyapura Sub Division.

ಅಂದಾಜು ಮೊತ್ತ: 25.00 ಲಕ್ಷಗಳು

Work Code: 010-15-000074

(1) ಸದರಿ ಕೆಲಸವನ್ನು ಕಾರ್ಯಾದೇಶ ಸಂಖ್ಯೆ: **EE/BTP/BBMP/KRIDL/WO/144/2016-17** Date: **05.11.2016** ರಂದು ಗುತ್ತಿಗೆದಾರರಾದ **Executive Engineer, KRIDL** ರವರಿಗೆ ವಹಿಸಿಕೊಟ್ಟಿರುತ್ತದೆ. ಸದರಿಯವರು ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದ್ದು, ಸಂಬಂಧಿಸಿದಂತೆ ಕಾಮಗಾರಿಯ ***First & Final*** ಬಿಲ್ಲನ್ನು ರೂ. **24,83,546.40** ಗಳಿಗೆ ತಯಾರಿಸಿ ಅಳತೆಗಳನ್ನು ಅಳತೆ ಪುಸ್ತಕ: 1926 ಪುಟ: 192589 ರಿಂದ 192600ರಲ್ಲಿ ನಮೂದಿಸಿ ಬಿಲ್ ಪಾವತಿಗಾಗಿ ಕಡತವನ್ನು ಸಲ್ಲಿಸಿದೆ.

(2) ಕಾಮಗಾರಿ ನಿರ್ವಹಣೆ ಹಾಗೂ ಸಾಮಗ್ರಿಗಳ ಗುಣ ಮಟ್ಟವನ್ನು ಗುಣ ನಿಯಂತ್ರಣಕ್ಕೆ ಒಳಪಡಿಸಿ ದೃಢೀಕರಣವನ್ನು ಲಗತ್ತಿಸಿದೆ.

Jodha
AE 15/3/17

Assistant Executive Engineer
Vidyaranyapura Sub Division
BBMP, Bangalore - 97

(04)

ಪೂ.ವಿ.ಉ. ವಿದ್ಯಾರಣ್ಯಪುರ ಉಪವಿಭಾಗವು ಸದರಿ ಕಾಮಗಾರಿಯನ್ನು ಕೈಗೊಳ್ಳಲು ಒಪ್ಪಿಗೆಗಾಗಿ ವಿನಂತಿಸಿರುತ್ತಾರೆ.

ಸದರಿ ಕಾಮಗಾರಿಯನ್ನು ಪರಿಶೀಲಿಸಿ, ಬಿಟ್ಟುಬಿಟ್ಟಿನ ಮೊತ್ತ ರೂ 25,00,000-00 ಕ್ಕೆ ಒಪ್ಪಿ ಪೂ.ವಿ.ಉ. ಕಾರ್ಯಾದೇಶ ಸಂಖ್ಯೆ 177973-04

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಳುಹಿಸಿದ ಶ್ರೀ: 23.22.027-ರಂದು (ಈ ಇಪ್ಪತ್ತೆರಡು ಇಪ್ಪತ್ತೆರಡು ಸಾವಿರದ ಇಪ್ಪತ್ತೇಳು ಶ್ರಾವಣ ಮಾಸ) ನಡೆಯಲಿರುವ ಶ್ರೀವಿಷ್ಣುವಿನ ಮುಖದ ಪ್ರತಿಷ್ಠಾಪನೆಯ ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಲಾಗಿದೆ.

ಇತಿ, ತಮ್ಮವಳೇ,

ಸಿ.ಇ.ಓ.

ಸಿ.ಇ.ಓ.

(ಅ) ಕಾರ್ಯಾಲಯದ ಅಂತರ್ಜಾಲ ವಿಳಾಸಕ್ಕೆ ಬಂದಿರುವ ಇ-ಮೇಲ್ ಸಂದೇಶವನ್ನು ಪರಿಶೀಲಿಸಿ ಅದರ ಪ್ರತಿಯನ್ನು ಕಡತಕ್ಕೆ ಲಗತ್ತಿಸಿ ಸಲ್ಲಿಸಲು ಕೋರಿದೆ.

ದಿ: 27/04

ಸ್ವಾ.ಅ.(ಕಾ.ನಿ)

(ಆ) ಕಾ.ನಿ.